**ಕರ್ನಾಟಕ ವಿಧಾನ ಪರಿಷತ್**

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : 1474 |
| ಸದಸ್ಯರ ಹೆಸರು | : ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 20.03.2025 |
| ಉತ್ತರಿಸುವ ಸಚಿವರು | : ಮಾನ್ಯ ಉಪ ಮುಖ್ಯಮಂತ್ರಿಗಳು. |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಅಡಿ ಮುಳುಗಡೆಯಾಗುವ ಜಮೀನುಗಳನ್ನು 524.256ಮೀ. ಮೂಲಕ ಒಂದೇ ಹಂತದಲ್ಲಿ ಭೂ ಸ್ವಾಧೀನಪಡಿಸಿಕೊಳ್ಳುವ ಪ್ರಸ್ತಾವನೆಯನ್ನು ಪ್ರಸಕ್ತ 2025-26ನೇ ಸಾಲಿನ ಬಜೆಟ್ ಪ್ಯಾರಾ 94ರಲ್ಲಿ ಸರ್ಕಾರ ಘೋಷಿಸಿದ್ದು, ಈಗಾಗಲೇ 522 FRL ಅಡಿಯ ವ್ಯಾಪ್ತಿಗೆ ಬರುವ ಜಮೀನುಗಳ ಭೂ ಸ್ವಾಧೀನ ಪ್ರಕ್ರಿಯೆ ಜಾರಿಯಲ್ಲಿ ಇರುವ ಪ್ರಕರಣಗಳನ್ನು ರದ್ದುಪಡಿಸದೇ ಮುಂದುವರಿಸಿ ಪರಿಹಾರ ಧನ ನೀಡಲಾಗುವುದೇ; (ಮಾಹಿತಿ ನೀಡುವುದು) | ದಿನಾಂಕ:16.12.2024ರಂದು ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಹಾಗೂ ಸನ್ಮಾನ್ಯ ಉಪ ಮುಖ್ಯಮಂತ್ರಿಗಳ ಉಪಸ್ಥಿತಿಯಲ್ಲಿ ಬೆಳಗಾವಿಯಲ್ಲಿ ಪ್ರಮುಖವಾಗಿ ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ-3ರ ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ನಿರ್ಮಾಣದ ವಿಷಯಗಳ ಕುರಿತು, ಬಾಗಲಕೋಟೆ-ವಿಜಯಪುರ ಜಿಲ್ಲೆಯ ಜನ ಪ್ರತಿನಿಧಿಗಳು ಹಾಗೂ ಯೋಜನೆಯ ಮುಳುಗಡೆ ಸಂತ್ರಸ್ತರೊಂದಿಗೆ ಸಭೆಯನ್ನು ಜರುಗಿಸಲಾಗಿದ್ದು, ಸಭೆಯಲ್ಲಿ ಚರ್ಚಿಸಿದಂತೆ ಪ್ರಮುಖ ಬೇಡಿಕೆಗಳನ್ವಯ ಕೃಷ್ಣಾ ಮೇಲ್ದಂಡೆ ಹಂತ-3ರ ಭೂಸ್ವಾಧೀನತೆ ಮತ್ತು ಪುನರ್ವಸತಿ & ಪುನರ್ ನಿರ್ಮಾಣಗಳ ಕುರಿತು ಕೈಗೊಂಡ ನಿರ್ಣಯಗಳು, ಒಪ್ಪಂದದ ಐತೀರ್ಪಿ (Consent Award) ನ ಪರಿಷ್ಕರಣೆ, ಯೋಜನೆಯ ಪರಿಷ್ಕೃತ ಅಂದಾಜು ಪ್ರಸ್ತಾವನೆ, 2025-26ನೇ ಸಾಲಿನ ಆಯವ್ಯಯ ಕಂಡಿಕೆ (94) ರಲ್ಲಿ ಘೋಷಿಸಿರುವ ಅಂಶಗಳು ಹಾಗೂ ಇನ್ನಿತರೆ ಅಗತ್ಯ ನಿರ್ಣಯಗಳ ಕುರಿತು ಅನುಮೋದನೆಗಾಗಿ ಸಚಿವ ಸಂಪುಟದ ಮುಂದೆ ಮಂಡಿಸಲು ಕ್ರಮ ವಹಿಸಲಾಗುತ್ತಿದೆ. |
| ಆ) | ಬೆಳಗಾವಿಯಲ್ಲಿ 2024ನೇ ಡಿಸೆಂಬರ್ ತಿಂಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಮುಳುಗಡೆ ವ್ಯಾಪ್ತಿಯ ರೈತರು, ಜನಪ್ರತಿನಿಧಿಗಳ ಜೊತೆಗೆ ನಡೆಸಿದ ಸಭೆಯಲ್ಲಿ ಚರ್ಚಿಸಿದಂತೆ ನೀರಾವರಿ ಜಮೀನುಗಳ ಬೆಲೆ 50 ಲಕ್ಷ ಒಣ ಬೇಸಾಯದ ಜಮೀನು ಬೆಲೆ 40 ಲಕ್ಷದಂತೆ ಒಪ್ಪಿಗೆ ಐತೀರ್ಪಿನಲ್ಲಿ ಪರಿಹಾರ ಧನ ನೀಡಲಾಗುವುದೇ; ಇಲ್ಲದಿದ್ದಲ್ಲಿ ಒಪ್ಪಿಗೆ ಐತೀರ್ಪಿನ ಬೆಲೆ ಎಷ್ಟು; (ಮಾಹಿತಿ ನೀಡುವುದು) | |
| ಇ) | ಪ್ರಸಕ್ತ ವರ್ಷದಲ್ಲಿ ಈ ಯೋಜನೆಯ ಭೂ ಸ್ವಾಧೀನ, ಪುನರ್ವಸತಿ ಕಾರ್ಯಕ್ರಮಗಳಿಗಾಗಿ ಕಾಯ್ದಿರಿಸಿರುವ ಹಣವೆಷ್ಟು; (ಮಾಹಿತಿ ನೀಡುವುದು) | ಭೂಸ್ವಾಧೀನ, ಪುನರ್ವಸತಿ & ಪುನರ್ ನಿರ್ಮಾಣಕ್ಕಾಗಿ 2024-25 ಸಾಲಿನ ಆಯವ್ಯಯದಲ್ಲಿ ರೂ.1200.00 ಕೋಟಿ ಹಾಗೂ 2025-26ನೇ ಸಾಲಿನ ಆಯವ್ಯಯದಲ್ಲಿ ಸಧ್ಯಕ್ಕೆ ರೂ.1700.00 ಕೋಟಿ ಅನುದಾನ ಹಂಚಿಕೆ ಮಾಡಲಾಗಿದೆ. |
| ಈ) | ಈ ಯೋಜನೆ ಪೂರ್ಣಗೊಳ್ಳಲು ಬೇಕಾದ ಇಂದಿನ ಪರಿಷ್ಕೃತ ಅಂದಾಜು ವೆಚ್ಚವೆಷ್ಟು? | 2024-25 ನೇ ಸಾಲಿನ ದರಪಟ್ಟಿ ಹಾಗೂ ದಿನಾಂಕ:25.01.2023ರ ಕಂದಾಯ ಇಲಾಖೆಯ ಆದೇಶದ ಒಪ್ಪಂದದ ಐತೀರ್ಪು ದರ ಸೇರಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಪರಿಷ್ಕೃತ ಅಂದಾಜು ಮೊತ್ತವು ಸುಮಾರು ರೂ.87,818.82 ಕೋಟಿ ಆಗಿರುತ್ತದೆ. |

ಜಸಂಇ 42 ಡಬ್ಲ್ಯೂಬಿಎಂ 2025

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿಗಳು